**ವ್ಯಾಖ್ಯಾನ**

# ಬೂಚಿ ಬಂದಿದೆ, ರಂಗ ಬೂಚಿ ಬಂದಿದೆ

ಶ್ರೀ ಪುರಂದರದಾಸರ **"ಬೂಚಿ ಬಂದಿದೆ"** ಎಂಬ ಕೀರ್ತನೆಯನ್ನು ಶ್ರೀಮನ್ಮಧ್ವಾಚಾರ್ಯರ **ದ್ವೈತ ಸಿದ್ಧಾಂತದ (ತತ್ವವಾದ)** ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ, ಇದು ಕೇವಲ ಮಕ್ಕಳನ್ನು ಮಲಗಿಸುವ ಹಾಡಾಗಿ ಉಳಿಯದೆ, '**ದೇವತಾ ತಾರತಮ್ಯ**' ಮತ್ತು '**ಹರಿ ಸರ್ವೋತ್ತಮತ್ವ**' ಸಾರುವ ಒಂದು ಮಹಾನ್ ಅಧ್ಯಾತ್ಮಿಕ ರೂಪಕವಾಗಿ ಕಾಣುತ್ತದೆ.

ಶ್ರೀ ಪುರಂದರದಾಸರ ಈ ಕೀರ್ತನೆಯು ಮೇಲ್ನೋಟಕ್ಕೆ ತಾಯಿ ಯಶೋದೆಯು ಬಾಲಕೃಷ್ಣನಿಗೆ ಹಾಲು ಕುಡಿಸಿ ಮಲಗಿಸಲು 'ಬೂಚಿ' (ಭೂತ ಅಥವಾ ಹಾರುವ ಹಕ್ಕಿ/ಪ್ರಾಣಿ) ಬರುತ್ತದೆ ಎಂದು ಹೆದರಿಸುವ "ಜೋಗುಳದ ಹಾಡು" ಅಥವಾ "ಲಾಲಿ ಹಾಡು" ಎನಿಸುತ್ತದೆ. ಆದರೆ, ಹರಿದಾಸ ಸಾಹಿತ್ಯದ ಆಳವಾದ ದೃಷ್ಟಿಯಲ್ಲಿ ನೋಡಿದಾಗ, ಇಲ್ಲಿ ದಾಸರು **'ದೇವತಾ ತಾರತಮ್ಯ'** ಮತ್ತು ಪರಮಾತ್ಮನ ಸರ್ವೋತ್ತಮತ್ವವನ್ನು ಅತ್ಯಂತ ಸ್ವಾರಸ್ಯವಾಗಿ, ಅರ್ಥಗರ್ಭಿತವಾಗಿ, ಎಲ್ಲರಿಗೂ ಮನಮುಟ್ಟುವಂತೆ ವಿವರಿಸಿದ್ದಾರೆ ಎಂದು ಎನಿಸುತ್ತದೆ.

ಯಶೋದೆಯ ವಾತ್ಸಲ್ಯದ ಮುಂದೆ ಪರಮಾತ್ಮನು ಮಗುವಾಗಿ ಶರಣಾಗಿದ್ದಾನೆ. ಭಕ್ತನು ಪ್ರೀತಿಯಿಂದ ಕರೆದರೆ ದೇವರು ಯಾವುದಕ್ಕೂ ಸಿದ್ದ ಎನ್ನುವುದೇ ಈ ಹಾಡಿನ ಲೌಕಿಕ ಸೊಬಗು. ಇಲ್ಲಿ ಬರುವ ಪ್ರತಿಯೊಂದು 'ಬೂಚಿ'ಯೂ ಒಬ್ಬೊಬ್ಬ ದೇವತೆಗಳ ಸಂಕೇತ.

**ತಾರತಮ್ಯದ ಪ್ರಕಾರ** ಬ್ರಹ್ಮ, ರುದ್ರ, ಇಂದ್ರ, ಷಣ್ಮುಖ - ಇವರೆಲ್ಲರೂ ಮಹಾನ್ ದೇವತೆಗಳಾಗಿದ್ದರೂ, ಅಂತಿಮವಾಗಿ ಇವರೆಲ್ಲರೂ ಶ್ರೀಹರಿಯ (ಕೃಷ್ಣನ) ಸೇವಕರು. ಇವರು ಜೀವಿಗಳನ್ನು **ಶ್ರೀ** ಹರಿಯ ಹತ್ತಿರಕ್ಕೆ ಕರೆದೊಯ್ಯುವ ದಾರಿದೀಪಗಳು. ಹರಿದಾಸರುಗಳು ಯಶೋದೆಯ ಪ್ರೀತಿ, ವಾತ್ಸಲ್ಯವನ್ನು ಮತ್ತು ಬಾಲಕೃಷ್ಣನ ಲೀಲೆಗಳನ್ನು ಈ ಹಾಡಿನಲ್ಲಿ ತೋರಿಸಿದ್ದಾರೆ. ಭಕ್ತನು ಪ್ರೀತಿಯಿಂದ ಕರೆದರೆ ದೇವರು ಯಾವುದಕ್ಕೂ ಸಿದ್ದ ಎನ್ನುವುದನ್ನೆ ಹಾಡಿನಲ್ಲಿ ನಿರೂಪಿಸಿದ್ದಾರೆ.

ಮಧ್ವ ಸಿದ್ಧಾಂತದ ಪ್ರಕಾರ ಇದರ ಸವಿಸ್ತಾರವಾದ ವ್ಯಾಖ್ಯಾನ ಈಗ ನೋಡೋಣ:

**ಪಲ್ಲವಿ - ಅನುಪಲ್ಲವಿ:**

**ಬೂಚಿ ಬಂದಿದೆ, ರಂಗ ಬೂಚಿ ಬಂದಿದೆ ||**
**ಚಾಚಿ ಕುಡಿದು ಸುಮ್ಮನೆ ನೀ ಪಾಚಿಕೊಳ್ಳೊ ಕೃಷ್ಣಯ್ಯ ||**

ಯಶೋದೆಯು ಕೃಷ್ಣನಿಗೆ ಹೇಳುತ್ತಿದ್ದಾಳೆ: "ಕೃಷ್ಣಾ, ಹಠ ಮಾಡದೆ ಹಾಲನ್ನು ಕುಡಿದು ಸುಮ್ಮನೆ ಮಲಗಿಕೋ (ಪಾಚಿಕೊಳ್ಳೊ), ಇಲ್ಲದಿದ್ದರೆ ಬೂಚಿ ಬಂದು ನಿನ್ನನ್ನು ಹಿಡಿದುಕೊಂಡು ಹೋಗುತ್ತದೆ." ಕೃಷ್ಣನು ಸಾಕ್ಷಾತ್ ಭಗವಂತ, ಪರಬ್ರಹ್ಮ. ಆತನು ತನ್ನ ಭಕ್ತರ ಒಳಿತಿಗಾಗಿ ಮಗುವಿನಂತೆ ನಟಿಸುತ್ತಿದ್ದಾನೆ. ಈ ಜಗತ್ತಿನ ಸಕಲ ದೇವತೆಗಳೂ ಆತನ ದರ್ಶನಕ್ಕಾಗಿ ಕಾದು ನಿಂತಿರುವುದನ್ನು ದಾಸರು 'ಬೂಚಿ ಬಂದಿದೆ' ಎಂಬುದನ್ನು ತಾರತಮ್ಯದ ಆಧಾರದ ಮೇಲೆ ವಿವರಿಸುತ್ತಾರೆ.

**ಚರಣ ೧: ಬ್ರಹ್ಮದೇವ - ನಾಕು ಮುಖದ ಬೂಚಿ**

**ನಾಕು ಮುಖದ ಬೂಚಿಯೊಂದು ಗೋಕುಲಕ್ಕೆ ಓಡಿ ಬಂದು |**
**ತೋಕರನ್ನು ಎಳೆದುಕೊಂಡು ಕಾಕು ಮಾಡಿ ಒಯ್ಯುವುದಕೆ ||**

ಸುಂದರ ರೂಪಕದ ಮೂಲಕ 'ನಾಕು ಮುಖದ ಬೂಚಿ' ಎಂದರೆ ಚತುರ್ಮುಖ ಬ್ರಹ್ಮದೇವರು. ದೇವತಾ ತಾರತಮ್ಯದ ಪ್ರಕಾರ ಮಹಾಲಕ್ಷ್ಮಿಯ ನಂತರದ ಸ್ಥಾನ ಚತುರ್ಮುಖ ಬ್ರಹ್ಮನದ್ದು. ಇವನು ಸೃಷ್ಟಿಕರ್ತ. ಸೃಷ್ಟಿಕರ್ತನಾದ ಬ್ರಹ್ಮದೇವರೇ ಶ್ರೀಹರಿಯ ದರ್ಶನಕ್ಕೆಂದು, ಅವನ ಬಾಲ ಲೀಲೆಗಳನ್ನು ನೋಡಿ ಆನಂದಿಸಲು ಗೋಕುಲಕ್ಕೆ ಬಂದಿದ್ದಾನೆ. ಮಕ್ಕಳಿಗೆ ನಾಲ್ಕು ಮುಖದ ಬ್ರಹ್ಮನು ವಿಚಿತ್ರವಾಗಿ ಅಥವಾ ಹೆದರಿಕೆ ಹುಟ್ಟಿಸುವಂತೆ ಕಾಣಬಹುದು ಎಂದು ಯಶೋದೆಯು ಕೃಷ್ಣನಿಗೆ ಹೇಳುತ್ತಿದ್ದಾಳೆ.

ಇಲ್ಲಿ 'ತೋಕರನ್ನು ಎಳೆದುಕೊಂಡು, ಕಾಕು ಮಾಡಿ ಒಯ್ಯುವುದು' ಎಂದರೆ, ಜೀವರಿಗೆ ಅಂಟಿರುವ ಸಂಸಾರದ ಮೋಹವನ್ನು (ಕಾಕು) ಬಿಡಿಸಿ, ಅವರನ್ನು ಜ್ಞಾನದ ಹಾದಿಗೆ ಎಳೆಯುವುದು ಎಂದರ್ಥ.

**ಚರಣ ೨: ರುದ್ರದೇವರು - ಮೂರು ಕಣ್ಣಿನ ಬೂಚಿ**

**ಮೂರು ಕಣ್ಣಿನ ಬೂಚಿಯೊಂದು ಊರು ಊರು ಸುತ್ತಿ ಬಂದು |**
**ದ್ವಾರದಲ್ಲಿ ನಿಂತಿದೆ ನೋಡೊ ಪೋರರನ್ನು ಒಯ್ಯುವುದಕೆ ||**

ದಾಸರು ಅರ್ಥೈಸಿರುವ ಇದು ಇನ್ನೊಂದು ಸುಂದರವಾದ ರೂಪಕ. 'ಮೂರು ಕಣ್ಣು' ಎಂದರೆ ತ್ರಿನೇತ್ರಧಾರಿಯಾದ ರುದ್ರದೇವರು ಎಂದರೆ ಮೂರು ಕಣ್ಣಿನ ಬೂಚಿ. ಇವರು ಹರಿಯ ದರ್ಶನಕ್ಕಾಗಿ "ಊರು ಊರು ಸುತ್ತಿ ಬಂದು ಈಗ ನಿನ್ನ ಮನೆಯ ಬಾಗಿಲಲ್ಲಿ (ದ್ವಾರದಲ್ಲಿ) ನಿಂತಿದ್ದಾರೆ. ಕೃಷ್ಣಾ, ಬೇಗ ಮಲಗಿಕೋ" ಎಂದು ಯಶೋದೆಯು ಹೇಳುತ್ತಿದ್ದಾಳೆ.

ಮಧ್ವ ಸಿದ್ಧಾಂತದ ಪ್ರಕಾರ ರುದ್ರದೇವರು ಐದನೆಯ ಕಕ್ಷೆಯಲ್ಲಿ ಬರುತ್ತಾರೆ. ಅವರು ತಾರತಮ್ಯದಲ್ಲಿ ಬ್ರಹ್ಮ-ವಾಯುಗಳ ಕೆಳಗಿನ ಸ್ಥಾನದಲ್ಲಿದ್ದಾರೆ. ರುದ್ರದೇವರು 'ಮನೋನಿಯಾಮಕ' ದೇವತೆಗಳು.

ಲಯಕರ್ತನಾದ ರುದ್ರದೇವರು ಹರಿಭಕ್ತರಲ್ಲಿ ಅಗ್ರಗಣ್ಯರು. ಅವರು 'ಘೋರರನ್ನು (ಜೀವಿಗಳನ್ನು) ಒಯ್ಯಲು' ದ್ವಾರದಲ್ಲಿ ನಿಂತಿದ್ದಾರೆ ಎಂದರೆ, ಸಾಧಕನ ಮನಸ್ಸನ್ನು ಲೌಕಿಕದಿಂದ ಬಿಡಿಸಿ ಹರಿಯ ಕಡೆಗೆ ಕರೆದೊಯ್ಯಲು ಸಿದ್ಧರಾಗಿದ್ದಾರೆ ಎಂದರ್ಥ.

**ಚರಣ ೩: ಇಂದ್ರದೇವ - ಅಂಗವೆಲ್ಲ ಕಂಗಳುಳ್ಳ ಬೂಚಿ**

**ಅಂಗವೆಲ್ಲ ಕಂಗಳುಳ್ಳ ಶೃಂಗಾರ ಮುಖದ ಬೂಚಿ |**
**ಬಂಗಾರದಂಥ ಮಕ್ಕಳನೆಲ್ಲ ಕಂಗೆಡಿಸಿ ಒಯ್ಯುವುದಕೆ ||**

'ಅಂಗವೆಲ್ಲ ಕಂಗಳುಳ್ಳ ಶೃಂಗಾರ (ಅತಿ ಚೆಲುವ) ಮುಖದ ಬೂಚಿ' ಎಂದರೆ ಸಾವಿರ ಕಣ್ಣುಳ್ಳ (ಸಹಸ್ರಾಕ್ಷ) ಇಂದ್ರದೇವ. ಇವರು ದೇವತೆಗಳ ರಾಜ. ಆತನ ಶರೀರದ ತುಂಬಾ ಕಣ್ಣುಗಳಿರುವುದನ್ನು ಕಂಡು ಮಕ್ಕಳು ಕಂಗೆಡಬಹುದು (ಹೆದರಬಹುದು) ಎಂಬುದು ಇಲ್ಲಿನ ಭಾವ. ಇಂತಹ ಇಂದ್ರದೇವರು ಬಂದಿದ್ದಾರೆ ಎಂದು. ಮಧ್ವ ಸಿದ್ಧಾಂತದ ಅನ್ವಯ ಇವರು ಸ್ವರ್ಗದ ಅಧಿಪತಿ. ಭಗವಂತನ ವಿಭೂತಿ ರೂಪಗಳನ್ನು ಸದಾ ಗಮನಿಸುತ್ತಿರುತ್ತಾರೆ. ಇಂದ್ರಾದಿ ದೇವತೆಗಳು ಜೀವಿಗಳ ಇಂದ್ರಿಯಗಳನ್ನು ನಿಯಂತ್ರಿಸುವವರು. 'ಬಂಗಾರದಂತಹ (ಸಾತ್ವಿಕ) ಜೀವಿಗಳನ್ನು' ಲೌಕಿಕ ವಿಷಯಗಳಿಂದ 'ಕಂಗೆಡಿಸಿ' (ವಿಮುಖರನ್ನಾಗಿಸಿ) ಅಧ್ಯಾತ್ಮದತ್ತ ಸೆಳೆಯುವುದು ಇವರ ಕಾರ್ಯ.

**ಚರಣ ೪: ಷಣ್ಮುಖ (ಸುಬ್ರಹ್ಮಣ್ಯ - ಆರು ಮುಖದ ಬೂಚಿ)**

**ಆರು ಮುಖದ ಬೂಚಿಯೊಂದು ಈರಾರು ಕಂಗಳದಕೆ |**
**ಬಾರಿ ಬಾರಿ ಅಳುವ ಮಕ್ಕಳ ದೂರ ಸೆಳೆದು ಒಯ್ಯುವುದಕೆ ||**

ಇದು ಮತ್ತೊಂದು ರೂಪಕ. 'ಆರು ಮುಖ' ಮತ್ತು 'ಈರಾರು ಕಣ್ಣು' (೧೨ ಕಣ್ಣು) ಎಂದರೆ ಶಿವನ ಪುತ್ರ ಷಣ್ಮುಖ. ಯುದ್ಧದೇವನಾದ ಷಣ್ಮುಖನು ತನ್ನ ಆರು ಮುಖಗಳಿಂದ ನೋಡುತ್ತಾ ಬಂದಿದ್ದಾನೆ. ಪದೇ ಪದೇ ಅಳುವ ಮಕ್ಕಳನ್ನು ಇವನು ದೂರ ಕರೆದುಕೊಂಡು ಹೋಗುತ್ತಾನೆ ಎಂದು ಕೃಷ್ಣನನ್ನು ಹೆದರಿಸಿ ಮಲಗಿಸಲು ಪ್ರಯತ್ನಿಸುತ್ತಿದ್ದಾಳೆ.

ಷಣ್ಮುಖ (ಆರು ಮುಖವುಳ್ಳವನು) ದೇವತೆಯು ಬ್ರಹ್ಮನ ಪುತ್ರನಾದ ಕಾಮದೇವನ ಅವತಾರಗಳಲ್ಲಿ ಒಬ್ಬನು. ಷಣ್ಮುಖನು ಸಾಕ್ಷಾತ್ ಶ್ರೀಹರಿಯ ಪರಮ ಭಕ್ತ. ಈತನನ್ನು 'ಭಾಗವತೋತ್ತಮ' ಎಂದು ಕರೆಯಲಾಗುತ್ತದೆ. ಈತನು ಕೇವಲ ಯುದ್ಧವೀರನಲ್ಲ, ಜ್ಞಾನದ ಸಾಕಾರ ರೂಪವೂ ಹೌದು. ಗಣಪತಿಯ ತಮ್ಮನಾದ ಈತನು ಸಾಧಕರಿಗೆ ಅಂತರಂಗದ ಶತ್ರುಗಳನ್ನು (ಕಾಮ, ಕ್ರೋಧ ಇತ್ಯಾದಿ) ಗೆಲ್ಲಲು ಶಕ್ತಿ ನೀಡುತ್ತಾನೆ.

ಮಧ್ವ ಸಿದ್ಧಾಂತದ ಪ್ರಕಾರ ಷಣ್ಮುಖ ಅಥವಾ ಸುಬ್ರಹ್ಮಣ್ಯನು ಇಂದ್ರ, ಕಾಮರ ಜೊತೆ ೮ ನೆಯ ಕಕ್ಷೆಯಲ್ಲಿ ಬರುವ ದೇವತೆ. ಸಂಸಾರದ ಕಷ್ಟಕ್ಕೆ ಅಳುವ ಜೀವಿಗಳ ಅಳುವನ್ನು ನಿಲ್ಲಿಸಿ, ಅವರನ್ನು ಸನ್ಮಾರ್ಗಕ್ಕೆ ತರುವ ಶಕ್ತಿ ಇವರಿಗಿದೆ.

**ಚರಣ ೫: ಮುಖ್ಯಪ್ರಾಣ/ಪುರಂದರ ವಿಠಲ**

**ಮರದ ಮೇಲೆ ಇರುವುದೊಂದು ಕರಿ ಕರಾಳದ ಮುಖದ ಬೂಚಿ |**
**ತರಳರನ್ನು ಎಳೆದುಕೊಂಡು ಪುರಂದರ ವಿಠಲಗೊಪ್ಪಿಸಲಿಕೆ ||**

ಈ ನುಡಿಯು ಕೀರ್ತನೆಯ ಅತಿ ಮುಖ್ಯ ಭಾಗ. ಮಧ್ವ ಸಿದ್ಧಾಂತದ ಮೂಲ ಮಂತ್ರವಾದ 'ವಾಯು ಜೀವೋತ್ತಮತ್ವ' ಇಲ್ಲಿದೆ.

- **ಮರದ ಮೇಲೆ ಇರುವುದು:** ಇಲ್ಲಿ ಮರ ಎಂದರೆ ಶರೀರ/ಸಂಸಾರ ವೃಕ್ಷ. ಇದರ ಮೇಲೆ ಸರ್ವದಾ ಇರುವವನು ಮುಖ್ಯಪ್ರಾಣ ದೇವರು (ವಾಯು ದೇವರು).
- **ಕರಿ ಕರಾಳ ಮುಖ:** ಇದು ಜ್ಞಾನದ ಸಂಕೇತವಾದ ವಾಯುದೇವರ (ಮುಖ್ಯಪ್ರಾಣ ದೇವರು) ಒಂದು ರೂಪವೆನ್ನಬಹುದು ಅಥವಾ ಕಾಲಪುರುಷನೆನ್ನಬಹುದು. (ದುಷ್ಟ ಶಿಕ್ಷಕ ರೂಪ).
- **ಪುರಂದರ ವಿಠಲಗೊಪ್ಪಿಸಲಿಕೆ:** ದ್ವೈತ ಸಿದ್ಧಾಂತದ ಪ್ರಕಾರ, ಯಾವ ಜೀವಿಯೂ ನೇರವಾಗಿ ಹರಿಯನ್ನು ತಲುಪಲಾರ. ವಾಯುದೇವರ ಮೂಲಕವೇ ಹರಿಯನ್ನು ಸೇರಬೇಕು. ಇಲ್ಲಿ ಬೂಚಿಯೆಂಬ ವಾಯುದೇವರು ಜೀವಿಗಳನ್ನು (ತರಳರನ್ನು) ಎಳೆದುಕೊಂಡು ಹೋಗಿ ಸರ್ವೋತ್ತಮನಾದ ಶ್ರೀ ಪುರಂದರ ವಿಠಲನ ಪಾದಗಳಿಗೆ ಒಪ್ಪಿಸುತ್ತಾರೆ. ಅಂದರೆ ಮುಕ್ತಿ ನೀಡುವುದು ವಾಯುದೇವರ ಶಿಫಾರಸ್ಸಿನ ಮೇರೆಗೆ ಶ್ರೀ ಹರಿಯು ಮಾಡುವ ಕೆಲಸ.

## ಸಾರಾಂಶ ಮತ್ತು ಅಧ್ಯಾತ್ಮಿಕ ತತ್ವ:

**ಈ ಹಾಡು ಶ್ರೀ ಪುರಂದರ ದಾಸರ ಒಂದು** ಲೌಕಿಕ ಸೊಗಸು **ಮತ್ತು ಆಧ್ಯಾತ್ಮದ ಚಮತ್ಕಾರ.** ದಾಸರು ಹಸುಮಕ್ಕಳನ್ನು ಮಲಗಿಸುವ ಸಾಮಾನ್ಯ ಹಾಡಿನಲ್ಲೇ ವೇದಾಂತದ ಗಹನವಾದ ವಿಚಾರಗಳನ್ನು ಅಡಕಗೊಳಿಸಿದ್ದಾರೆ. ಬೂಚಿ ಎಂದರೆ ಭಯಪಡುವ ವಸ್ತುವಲ್ಲ, ಅದು ದೇವತಾ ಸ್ವರೂಪ ಎಂದು ಜ್ಞಾನಿಗಳಿಗೆ ತಿಳಿಸಿಕೊಟ್ಟಿದ್ದಾರೆ.

೧. **ಬಿಂಬ-ಪ್ರತಿಬಿಂಬ ಭಾವ:** ಕೃಷ್ಣ ಬಿಂಬ. ಉಳಿದ ಎಲ್ಲಾ ದೇವತೆಗಳು ಮತ್ತು ಜೀವಿಗಳು ಪ್ರತಿಬಿಂಬಗಳು (ಸೇವಕರು).

೨. **ದೇವತೆಗಳ ಪಾತ್ರ:** ಇಲ್ಲಿ ಬರುವ ಪ್ರತಿಯೊಂದೂ, 'ಬೂಚಿ'ಯೂ, ದೇವತೆಗಳೇ. ಅವರ ಕೆಲಸ ಜೀವಿಗಳನ್ನು ಹೆದರಿಸುವುದಲ್ಲ, ಬದಲಾಗಿ ಸಂಸಾರದ ನಿದ್ದೆಯಿಂದ ಎಬ್ಬಿಸಿ ಪರಮಾತ್ಮನ ಸಾನ್ನಿಧ್ಯಕ್ಕೆ ಒಪ್ಪಿಸುವುದು.

೩. **ಸಾಧನೆ:** ಹಾಲನ್ನು ಕುಡಿಯುವುದು ಎಂದರೆ ಉಪದೇಶವನ್ನು, ಜ್ಞಾನವನ್ನು ಪಡೆಯುವುದು, ಮಲಗುವುದು ಎಂದರೆ ಧ್ಯಾನದಲ್ಲಿ ಮುಳುಗುವುದು.

ಒಟ್ಟಾರೆಯಾಗಿ, **"ಬೂಚಿ ಬಂದಿದೆ"** ಎನ್ನುವುದು ಕೇವಲ ಹೆದರಿಸುವ ಮಾತಲ್ಲ, ಅದು **"ದೈವವು ನಿನ್ನ ದ್ವಾರಕ್ಕೆ ಬಂದಿದೆ, ನಿನ್ನ ನಿದ್ದೆಯಿಂದ ಎಚ್ಚೆತ್ತು ಸಾತ್ವಿಕನಾಗಿ, ಆಧ್ಯಾತ್ಮಿಕ ಜ್ಞಾನಹೊಂದಿ ಮುಕ್ತಿ ಮಾರ್ಗ ಹಿಡಿ"** ಎನ್ನುವ ಎಚ್ಚರಿಕೆಯ ಸಂದೇಶ. ಇದು **ಪರಮಾತ್ಮನನ್ನು ಸೇರುವ** ಏಕೈಕ ಮಾರ್ಗ. ಇದುವೇ ಮಧ್ವ ಸಿದ್ಧಾಂತದ ತಿರುಳು."

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** Dr. ಅನಂತ ರಾವ್ ದಂಡಿನ್, ಬೆಂಗಳೂರು